**ಕರ್ನಾಟಕ ಸರ್ಕಾರ**
**ಕಂದಾಯ ಇಲಾಖೆ**

**ಸಂಖ್ಯೆ:** ಕಂಇ/ಎಜೆಎಸ್‌ಕೆ/ಆಡಳಿತ-82/18-19

ನಿರ್ದೇಶಕರ ಕಾರ್ಯಾಲಯ,
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ,
ಕೆ.ಆರ್.ವೃತ್ತ, ಬೆಂಗಳೂರು.
ದಿನಾಂಕ: 29.04.2020.

**ಜಿಲ್ಲಾಧಿಕಾರಿಗಳು,**
ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ,
ಧಾರವಾಡ, ಗದಗ, ಹಾವೇರಿ, ಕೊಪ್ಪಳ, ಮಂಡ್ಯ, ಮೈಸೂರು,
ರಾಯಚೂರು, ರಾಮನಗರ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆ.

**ಮಾನ್ಯರೇ,**

**ವಿಷಯ:** ರಾಜ್ಯದ ಎಲ್ಲಾ ನಾಡಕಛೇರಿಗಳಿಗೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಅಗತ್ಯ ಮಾರ್ಗಸೂಚಿ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಕಂಇ 67 ಎಜೆಎಸ್ 2018; ದಿನಾಂಕ: 10.12.2018.
2. ನಿರ್ದೇಶನಾಲಯದ ಸಮ ಸಂಖ್ಯೆ ಪತ್ರ ದಿನಾಂಕ: 22.09.2018, 11/20.10.2018, 10.01.2019, 16.10.2019.
3. ಸರ್ಕಾರದ ಪತ್ರ ಸಂಖ್ಯೆ: ಕಂಇ 24 ಎಜೆಎಸ್ 2019; ದಿನಾಂಕ: 04.10.2019.

*****

ರಾಜ್ಯದ ಎಲ್ಲಾ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಿಗೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡುವ ಹೊರಗುತ್ತಿಗೆ ಆಧಾರದ ನೇಮಕಾತಿಯ ವಿಕೇಂದ್ರಿಕೃತ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಹಿಸಿ, ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಮಟ್ಟದಲ್ಲಿ ಟೆಂಡರ್‌ನ್ನು ಕರೆಯುವ ಪ್ರಾಧಿಕಾರಿಯನ್ನಾಗಿ ಹಾಗೂ ಇ-ಟೆಂಡರ್ ಅಂತಿಮಗೊಳಿಸುವ ಹಾಗೂ ಇನ್ನಿತರ ಅನುಮೋದನೆಯನ್ನು ನೀಡಲು, ಜಿಲ್ಲಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ನೀಡಿ ಉಲ್ಲೇಖ [1] ರ ಸರ್ಕಾರದ ಆದೇಶದ ಮೇರೆಗೆ, ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಈಗಾಗಲೇ ಇ-ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿರುವ ಹಾಗೂ ಮುಂದಿನ ದಿನಗಳಲ್ಲಿ ಇ-ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರದ ಆದೇಶದಂತೆ ಸಮಿತಿಯನ್ನು ರಚನೆ ಮಾಡಿಕೊಂಡು ಕ್ರಮವಹಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನಾಲಯದ ಉಲ್ಲೇಖ [2] ರ ಪತ್ರಗಳಲ್ಲಿ ನಿರ್ದೇಶನ ನೀಡಿ, ನಿರ್ದೇಶನಾಲಯದಿಂದಲೇ ಕೇಂದ್ರೀಕೃತವಾಗಿ ಮಾದರಿ/ಕರಡು ಟೆಂಡರ್ ದಾಖಲೆಯನ್ನು ಸಿದ್ಧಪಡಿಸಿ, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿರುತ್ತದೆ.

ಸದರಿ ಟೆಂಡರ್ ದಾಖಲೆಯನ್ವಯ, ರಾಜ್ಯದ ಎಲ್ಲಾ ಹೋಬಳಿ ಮಟ್ಟದಲ್ಲಿರುವ 769 ನಾಡಕಛೇರಿಗಳಿಗೆ ತಲಾ ಇಬ್ಬರಂತೆ ಹಾಗೂ ಸರ್ಕಾರದಿಂದ ಅನುಮೋದನೆಯಾಗಿರುವಂತೆ ಒಬ್ಬ ಹೆಚ್ಚುವರಿ ಆಪರೇಟರ್ (769*2=1538), 122 ಫ್ರಂಟ್ ಆಫೀಸ್‌ಗಳಿಗೆ ತಲಾ ಒಂದು, 226 ತಾಲ್ಲೂಕು ಕಸಬಾ ಕೇಂದ್ರಗಳಲ್ಲಿ ಆರ್‌ಟಿಸಿ ವಿತರಣೆಗಾಗಿ ತಲಾ ಒಂದು ಹೆಚ್ಚುವರಿ ಆಪರೇಟರ್ ಹಾಗೂ 30 ಸ್ಪಂದನ ಕೇಂದ್ರಗಳಿಗೆ ತಲಾ ಒಬ್ಬರಂತೆ, ಅನುಬಂಧ-1 ರಲ್ಲಿ ತಿಳಿಸಿರುವಂತೆ, ಒಟ್ಟು 1916 ಡೇಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಿಸಿಕೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

Scanned by CamScanner

Scanned with CamScanner